


**ಕಿಟ್ಟು:** ಗುಂಡ ರಾತ್ರಿ ಕುಡಿದು ಮನೆಗೆ ಹೋದಾಗ ಹೆಂಡ್ತಿ ಬಾಗಿಲು ತೆಗೆಯಲಿಲ್ಲ ಕಣೋ. ರಸ್ತೆ ಪಕ್ಕದಲ್ಲಿದ್ದ ಮರದಡಿಯಲ್ಲಿ ಬಿದ್ದಿದ್ದೆ.
**ಗುಂಡ:** ಬೆಳಗ್ಗೆಯಾದಾಗ ಮನೆಗೆ ಹೋದೆ ತಾನೇ?
**ಕಿಟ್ಟು:** ಅಷ್ಟರಲ್ಲಿ ಕುಡಿದಿದ್ದ ಅಮಲು ಇಳಿದಿತ್ತು, ಆಮೇಲೆ ಗೊತ್ತಾಯ್ತು, ಊರಿಗೆ ಹೋಗಿದ್ದ ನನ್ನ ಹೆಂಡತಿ ಇನ್ನೂ ಮನೆಗೆ ಬಂದಿರಲಿಲ್ಲ ಅಂತ.

**ಡಾಕ್ಟರ್:** ಏನಯ್ಯಾ ದಿನ 10 ಗಂಟೆಗೆ ಸರಿಯಾಗಿ ನಮ್ಮ ಕ್ಲಿನಿಕ್ ಹತ್ತಿರ ಬರುತ್ತೀಯಲ್ಲ ಏಕೆ?
**ಆತ:** ನೀವೇ ಬೋರ್ಡ್ ಹಾಕಿದ್ದೀರಲ್ಲ ಸರ್, ಹೆಂಗಸರನ್ನು ನೋಡುವ ಸಮಯ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಅಂತ.

**ಮಾಣಿ:** ಯಾಕೆ ಅಳುತ್ತಿದ್ದೀರಿ?
**ಆತ:** ಕೈಕೊಟ್ಟ ಹುಡುಗಿಯನ್ನು ಮರೆಯಬೇಕಂತ ಚೆನ್ನಾಗಿ ಕುಡಿದೆ. ಆದರೆ, ಆ ಹುಡುಗಿ ಯಾರು ಅಂತಾನೇ ನೆನಪಿಗೆ ಬರ್ತಿಲ್ಲ!

**ನಳಿನಿ:** ಅಲ್ಲ ಲಲಿತಾ, ಗಂಡಸರು ದಿನಕ್ಕೆ ಸುಮಾರು 2000 ಪದಗಳನ್ನು ಬಳಸುತ್ತಾರೆ. ಆದರೆ ನಾವು ಅದರ ಡಬಲ್ ಪದಗಳನ್ನು ಬಳಸುತ್ತೇವಲ್ಲ ಏಕೆ?
**ಲಲಿತಾ:** ಹೌದು, ಗಂಡಸರಿಗೆ ಒಂದು ಸಾರಿ ಹೇಳಿದ ಮಾತು ಅರ್ಥ ಆಗುವುದಿಲ್ಲವಲ್ಲ ಅದಕ್ಕೆ.

**ರಮೇಶ:** ಭೀಮೇಶ ಕುಡಿತ, ಸಿಗರೇಟು, ಜೂಜು, ರೇಸು ಎಲ್ಲವನ್ನು ಅವಳಿಗಾಗಿ ಬಿಟ್ಟೆಯಲ್ಲ ಈಗ ಮದುವೆಯಾಗು.
**ಭೀಮೇಶ:** ಇಷ್ಟೆಲ್ಲ ಬಿಟ್ಟ ಮೇಲೆ ಅವಳನ್ನು ಯಾಕೆ ಮದುವೆಯಾಗಲಿ. ಇನ್ನು ಒಳ್ಳೆಯ ಹುಡುಗಿಯನ್ನು ಮದುವೆಯಾಗೋಣ ಅಂತ ಸುಮ್ಮನಿದ್ದೀನಿ.

**ಗಿರಿ:** ನಾಣಿ ಕಷ್ಟ ಯಾವತ್ತಿದ್ರೂ ಜೊತೆಗಿರುತ್ತೆ. ಆದರೆ ಸುಖ ಬಂದು ಹೋಗುತ್ತಿರುತ್ತದೆ. ಇದಕ್ಕೆ ಯಾವುದಾದರೂ ಒಂದು ಒಳ್ಳೆಯ ಉದಾಹರಣೆ ಕೊಡು.
**ನಾಣಿ:** ಹೆಂಡತಿ ಯಾವಾಗಲೂ ಜೊತೆಗಿರುತ್ತಾಳೆ. ಆದರೆ ಅವಳ ಗೆಳತಿಯರು ಬಂದು ಹೋಗುತ್ತಿರುತ್ತಾರೆ.

**ಪತಿ:** (ಫೋನ್‌ನಲ್ಲಿ) ಚಿನ್ನ ನಿನ್ನ ಜೊತೆ ತುಂಬಾ ಮಾತಾಡಬೇಕು.
**ಪತ್ನಿ:** ಸಂತೋಷ ಆಯ್ತು ಕಣ್ರೀ, ಬೆಳಿಗ್ಗೆ ನಾನೇ ನಿಮ್ಮ ಮೇಲೆ ಜಗಳ ಮಾಡಿದ್ದೆ. ಆದರೆ ನೀವು ಎಲ್ಲಾ ಮರೆತು ಮಾತಾಡಬೇಕು ಅಂತಿದ್ದೀರಲ್ಲ ಅದೇ ನನಗೆ ಸಂತೋಷ.
**ಪತಿ:** ಇದು ನಿನ್ನ ನಂಬರೇನೆ.

**ಆತ:** ನಾಯಿಗೆ ಈಜೋದಕ್ಕೆ ಬರುತ್ತೆ. ನಿನಗೆ ಬರೋದಿಲ್ಲ ಅಂದ್ರೆ ನೀನು ನಾಯಿಗಿಂತ ಕಡೆ.
**ಈತ:** ನಾಯಿಗೂ ಈಜೋದಕ್ಕೆ ಬರುತ್ತೆ, ನಿನಗೂ ಈಜುವುದಕ್ಕೆ ಬರುತ್ತೆ, ಹಾಗಾದರೆ ನಾಯಿಗೂ ನಿನಗೂ ವ್ಯತ್ಯಾಸವೇ ಇಲ್ವಾ?

**ಪ್ರೇಯಸಿ:** ನಾವು ಬೈಕಿನಲ್ಲಿ ಹೋಗುತ್ತಿರುವುದನ್ನು ನಮ್ಮ ತಂದೆ ನೋಡಿದರಂತೆ.
**ಪ್ರಿಯಕರ:** ಹೌದಾ, ಏನಂದ್ರು?
**ಪ್ರೇಯಸಿ:** ಏನೂ ಅಂದಿಲ್ಲ. ಓಡಾಟಕ್ಕೆಂದು ನನಗೆ ಕೊಡುತ್ತಿದ್ದ ಪಾಕೆಟ್ ಮನಿ ನಿಲ್ಲಿಸುತ್ತೇನೆ ಅಂದರು.

**ಪತಿ:** ನಿನಗೆ ಎಷ್ಟು ಸಲ ಹೇಳಿದ್ದೀನಿ, ಅಡುಗೆ ಮಾಡುವಾಗ ಮೊಬೈಲ್ ನೋಡಬೇಡ ಅಂತ. ನೀನು ಮಾಡಿರುವ ಸಾರಿಗೆ ಉಪ್ಪಿಲ್ಲ, ಹುಳಿ ಇಲ್ಲ.
**ಪತ್ನಿ:** ನಾನು ನಿಮಗೆ ಎಷ್ಟು ಸಲ ಹೇಳಿದ್ದೇನೆ. ಊಟ ಮಾಡುವಾಗ ನೀವು ಮೊಬೈಲ್ ನೋಡ್ಬೇಡಿ ಅಂತ. ನೀವು ಅನ್ನಕ್ಕೆ ನೀರು ಹಾಕಿಕೊಂಡಿದ್ದೀರಿ.




**ಅಧಿಕಾರಿ:** ಈ ಕೆಲಸದಲ್ಲಿ ಐದು ವರ್ಷಗಳ ಅನುಭವದ ಅಗತ್ಯವಿದೆ. ನಿಮಗೆ ಆ ಅನುಭವ ಇದೆಯೇ?
**ಅಭ್ಯರ್ಥಿ:** ಇದೆ ಸರ್! ಕಳೆದ ಐದು ವರ್ಷಗಳಿಂದಲೂ ಕೆಲಸ ಹುಡುಕುತ್ತಲೇ ಇದ್ದೇನೆ.

**ಶಿಕ್ಷಕ:** ಎಲ್ಲರಿಗೂ ಸಾಮಾನ್ಯವಾಗಿ ಗೊತ್ತಿರುವ ಪದ ಯಾವುದು?
**ಕಿಟ್ಟು:** 'ಗೊತ್ತಿಲ್ಲ' ಎನ್ನುವ ಪದ ಸಾರ್!

**ಸ್ಮಿತಾ:** ರೀ, ನಾವು ಆದಷ್ಟು ಬೇಗ ಮದುವೆ ಆಗೋಣ.
**ಮಹೇಶ:** ಯಾಕೆ, ಅಷ್ಟೊಂದು ಅವಸರ?
**ಸ್ಮಿತಾ:** ಇನ್ನೇನಿಲ್ಲ ಕಣ್ರೀ, ನನ್ನ ಗೆಳತಿಯರೆಲ್ಲ ಯಾವ ಮೂರ್ಖ ನಿನ್ನ ಮದುವೆಯಾಗುತ್ತಾನೆ, ನಾವು ನೋಡುತ್ತೇವೆ ಅಂತ ಸವಾಲ್ ಹಾಕಿದ್ದಾರೆ ಅದಕ್ಕೆ.

**ಪಕ್ಕದ ಮನೆಯಾಕೆ:** ಯಾಕ್ರೀ ನಿಮ್ಮ ಗಂಡನನ್ನು ಅಷ್ಟೊಂದು ಬೈಯುತ್ತಾ ಇದ್ರಿ?
**ಮನೆಯಾಕೆ:** ಫೇಸ್‌ಬುಕ್ ಬದಲು ಓಎಲ್‌ಎಕ್ಸ್‌ಗೆ ನನ್ನ ಫೋಟೊ ಹಾಕವ್ರೆ.

**ಧನಂಜಯ:** ಜನರಿಗೆ ಮೋಸ ಮಾಡಿ ಬದುಕುವವನು ಜೀವನದಲ್ಲಿ ಎಂದಿಗೂ ಉದ್ಧಾರವಾಗಲಾರ, ಹೌದಾ?
**ಲೋಕೇಶ:** ನಿನ್ನ ನೋಡಿದರೆ ಹಾಗೇನು ಅನ್ನಿಸುವುದಿಲ್ಲ.

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**